ಇಂದು ದಿ:21.09.2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಸಿಕೆಎಂ ವಕೀಲರಿಂದ ಃ

ಆರೋಪಿಗೆ ವಿದ್ಯಾಸಂಸ್ಥೆಯ ಆರ್ಥಿಕ ಮತ್ತು ಆಡಳಿತಾತ್ಮಕ ವ್ಯವಹಾರಗಳ ಬಗ್ಗೆ ಜವಾಬ್ದಾರಿ ವಹಿಸಿದ ಬಗ್ಗೆ ದಾಖಲೆಗಳು ಇಲ್ಲ. ಸಾಕ್ಷಿಯು ಮುಂದುವರಿದು ಆದರೆ ಶಾಲೆಯ ಆರಂಭದಿಂದ 2009ರವರಗೆ ಪೂರ್ಣ ನಿರ್ವಹಣೆಯನ್ನು ಆರೋಪಿ ಮಾಡುತ್ತಿದ್ದರು ಎಂಬ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆಂದು ಸ್ವಯಂ ನುಡಿಯುತ್ತಾರೆ. ವಕೀಲರು ಸಾಕ್ಷಿಗೆ ಒಂದು ದೃಢೀಕರಣ ಪತ್ರದ ದೃಢೀಕೃತ ನಕಲನ್ನು ತೋರಿಸಿ ಸದರಿ ದೃಢೀಕರಣ ಪತ್ರ ಮಾನ್ಯ ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ ನಿಶಾನೆಯಾಗಿ ಗುರುತಿಸಲ್ಪಟ್ಟ ದಾಖಲೆಯಾಗಿರುತ್ತದೆ ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ನಿಶಾನೆಯಾಗಿ ಗುರುತಿಸಲ್ಪಟ್ಟಿದೆ ಎಂದು ನುಡಿದು ಆದರೆ ಸದರಿ ದಾಖಲೆಯನ್ನು ನಾನು ನೀಡಿಲ್ಲವೆಂದು ನುಡಿದಿದ್ದು, ಸದರಿ ದಾಖಲೆಯನ್ನು ನಿಡಿ-5 ಎಂದು ಗುರುತಿಸಲಾಯಿತು. ನಿಡಿ-5ರಲ್ಲಿ ವ್ಯವಸ್ಥಾಪಕ ಧರ್ಮದರ್ಶಿ ಮಿಳಿಂದ ವಿದ್ಯಾಸಂಸ್ಥೆ ಎಂಬಲ್ಲಿ ಇರುವ ಸಹಿಯು ನನ್ನ ಸಹಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಿಡಿ-5ರಲ್ಲಿ ಇರುವ ಸಹಿ ನನ್ನದಾದರೂ ಸಹ ಅದರಲ್ಲಿ ಬರೆದಿರುವ ವಿಷಯ ನನ್ನದಲ್ಲವೆಂದು ಹಾಗೂ ಆರೋಪಿಯು ಶಾಲೆಯನ್ನು ನಿರ್ವಹಣೆ ಮಾಡುತ್ತಿದ್ದಾಗ ನಾನು ನಂಬಿಕೆಯಿಂದ ಖಾಲಿ ಲೆಟರ್‌ಹೆಡ್ ಗೆ ಸಹಿ ಮಾಡಿಕೊಟ್ಟಿದ್ದನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಸ್ವಯಂ ನುಡಿದಿರುತ್ತಾರೆ. ನಾನು ಆ ರೀತಿ ಎಷ್ಟು ಖಾಲಿ

ಲೆಟರ್‌ಹೆಡ್‌ಗಳಿಗೆ ಸಹಿ ಮತ್ತು ಸೀಲು ಮಾಡಿಕೊಟ್ಟಿದ್ದೇನಂದು ನನಗೆ ನೆನಪಿಲ್ಲ. ಆ ರೀತಿ ನಾನು ಯಾವ ದಿನಾಂಕ, ತಿಂಗಳು ಮತ್ತು ವರ್ಷದಲ್ಲಿ ಖಾಲಿ ಲೆಟರ್‌ಹೆಡ್‌ಗಳಿಗೆ ಸಹಿ ಮತ್ತು ಸೀಲು ಮಾಡಿಕೊಟ್ಟಿದ್ದೇನಂದು ಹೇಳಲಾಗುವುದಿಲ್ಲ. ನಾನು ಖಾಲಿ ಲೆಟರ್‌ಹೆಡ್‌ಗಳಿಗೆ ಸಹಿ ಮಾಡಿ ಆರೋಪಿಗೆ ಕೊಟ್ಟಿದ್ದನ್ನು ನೋಡಿದವರು ಇದ್ದಾರೆ. ಅವರುಗಳ ಹೆಸರು ಬೂತಯ್ಯ ಅವರು ಈಗ ಜೀವಂತವಿಲ್ಲ. ನೀವು ಯಾವ ಸಂದರ್ಭಗಳಲ್ಲಿ ಖಾಲಿ ಲೆಟರ್‌ಹೆಡ್‌ಗಳಲ್ಲಿ ಸಹಿ ಮತ್ತು ಸೀಲನ್ನು ಹಾಕಿ ಉಪಯೋಗಿಸಬೇಕು ಎನ್ನುವ ಬಗ್ಗೆ ನೀವು ಖಾಲಿ ಲೆಟರ್‌ಹೆಡ್‌ಗಳಿಗೆ ಸಹಿ ಮತ್ತು ಸೀಲು ಹಾಕಿ ಕೊಟ್ಟಿದ್ದೀರಿ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅನೇಕ ಸಂದರ್ಭಗಳಲ್ಲಿ ಶಾಲೆಯ ತುರ್ತು ನಿಮಿತ್ತಕ್ಕೋಸ್ಕರ ಕೊಟ್ಟಿದ್ದೇನೆ ಎಂದು ನುಡಿದಿರುತ್ತಾರೆ. ನಿಖರವಾಗಿ ಇಂತಹದೇ ಸನ್ನಿವೇಶ/ತುರ್ತು ಕೆಲಸ ಎಂಬ ಬಗ್ಗೆ ನಿಖರವಾಗಿ ಹೇಳಲಾಗುವುದಿಲ್ಲ.

ವಕೀಲರು ಸಾಕ್ಷಿಗೆ ಒಂದು ದಾಖಲೆ ತೋರಿಸಿ ಸದರಿ ದಾಖಲೆಯಲ್ಲಿರುವ ಸೀಲು ಮತ್ತು ಸಹಿ ನಿಮ್ಮದಾಗಿರುತ್ತದೆ ಎಂದು ಮಾಡಿದ ಸಲಹೆಗೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡು ಸದರಿ ದಾಖಲೆ ಸಹ ಅದೇ ರೀತಿ ದುರ್ಬಳಕೆಯಾಗಿದೆ ಎಂದು ನುಡಿದಿದ್ದು ಸದರಿ ದಾಖಲೆಯು ದೃಢೀಕೃತನಕಲಾಗಿದ್ದು ಅದನ್ನು ನಿಡಿ-6 ಎಂದು ಗುರುತಿಸಲಾಯಿತು. ನಿಡಿ-೬ರ ಪ್ರಕಾರ ಆರೋಪಿಯ ಕೆಲಸವನ್ನು ಶ್ಲಾಘಿಸಿ ಅವರಿಗೆ ಅಭಿನಂದನಾ ಪತ್ರವನ್ನು ನೀವೇ ಕೊಟ್ಟಿರುತ್ತೀರಿ ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ಅಪ್ಪಟ ಸುಳ್ಳು ಎಂದು ನುಡಿದಿರುತ್ತಾರೆ.

ಒಂದು ದಾಖಲೆ ಅಥವಾ ಪತ್ರಕ್ಕೆ ನನ್ನ ಸೀಲು ಮತ್ತು ಸಹಿ ಹಾಕಿದಾಗ ಆಗುವ ಪರಿಣಾಮದ ಬಗ್ಗೆ ನನಗೆ ವಿವೇಚನೆ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಟ್ರಸ್ಟ್‌ನ್ನು ನಂಬಿಕೆ ಆಧಾರದ ಮೇಲೆ ನಡೆಸಬೇಕಾಗಿರುವ ಕಾರಣ ಅದರ ಪರಿಣಾಮ ಗೊತ್ತಿದ್ದೂ ಸಹ ನಾನು ಈ ರೀತಿ ಖಾಲಿ ಲೆಟರ್‌ಹೆಡ್‌ಗಳಿಗೆ ಸಹಿ ಮತ್ತು ಸೀಲು ಮಾಡಿರುತ್ತೇನೆಂದು ಸಾಕ್ಷಿಯು ಸ್ವಯಂ ನುಡಿದಿರುತ್ತಾರೆ. ನಾನು ಖಾಲಿ ಲೆಟರ್‌ಹೆಡ್‌ಗಳಿಗೆ

ಸಹಿ ಮತ್ತು ಸೀಲು ಹಾಕಿ ಕೊಟ್ಟಿದ್ದನ್ನು ಬೂತಯ್ಯ ನೋಡಿದ್ದಾರೆಂದು ದುರುದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಈ ಹಂತದಲ್ಲಿ ಶ್ರೀ ಸಿಕೆಎಂ ವಕೀಲರ ಕೋರಿಕೆ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಗಿದೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

21.09.

ಹಿ.ಸಿ.ನ್ಯಾ ಮತ್ತು ಪ್ರದನ್ಯಾದಂ,
ಪಿರಿಯಾಪಟ್ಟಣ.